**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.8/2021**

ಸಾಕ್ಷಿದಾರರ ಹೆಸರು : ಹನುಮಂತಪ್ಪ

ತಂದೆಯ ಹೆಸರು : ಮಹಾಂತೇಶ

ವಯಸ್ಸು : 41 ವರ್ಷ

ಉದ್ಯೋಗ : ಸಿ.ಪಿ.ಐ., ತಳಕು ವೃತ್ತ, ಚಳ್ಳಕೆರೆ ತಾಲ್ಲೂಕು

ವಾಸ ಸ್ಥಳ : ಚಳ್ಳಕೆರೆ

ಪಿ.ಡಬ್ಲ್ಯೂ 9

ಸಿ.ಡಬ್ಲ್ಯೂ 13

ದಿ: 20-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಜನವರಿ 2021 ರಿಂದ ಸೆಪ್ಟೆಂಬರ್ 2021 ರವರೆಗೆ ನಾನು CEN ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ಮಾಡಿದ್ದೇನೆ. ದಿಃ 03-04-2021 ರಂದು ಚಾಸಾ-1 ರವರು ಮಧ್ಯಾಹ್ನ 1.45 ಗಂಟೆಗೆ ಗಾಂಜಾ ಮಾರಾಟ ಮಾಡುತ್ತಿರುವವರ ಮೇಲೆ ದಾಳಿ ಮಾಡಿ ಇಬ್ಬರು ಆರೋಪಿತರು ಹಾಗೂ ದಾಳಿ ಕಾಲಕ್ಕೆ ವಶಪಡಿಸಿಕೊಂಡ ಗಾಂಜಾ ಮತ್ತು ಪಂಚನಾಮೆ ತಂದು ಹಾಜರುಪಡಿಸಿ ಗಣಕೀಕೃತ ದೂರನ್ನು ತಯಾರಿಸಿ ನೀಡಿದ್ದು, ನಾನು ಠಾಣಾ ಗುನ್ನೆ ನಂಬರ 20/2021 ರಲ್ಲಿ ನೊಂದಾಯಿಸಿ FIR ನ್ನು ತಯಾರಿಸಿ FIR ನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಲ್ಲಿ

ನಿವೇದಿಸಿಕೊಂಡಿರುತ್ತೇನೆ. ಪ್ರ.ವ.ವರದಿಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಪ್ರ.ವ.ವರದಿಯನ್ನು ನಿಪಿ-35 ಅಂತ, ಸಾಕ್ಷಿಯ ಸಹಿಯನ್ನು ನಿಪಿ-35(ಎ) ಅಂತ ಗುರುತಿಸಲಾಯಿತು.

2. ನಂತರ ದಾಳಿ ಕಾಲಕ್ಕೆ ವಶಪಡಿಸಿಕೊಂಡ ಗಾಂಜಾ ಮುದ್ದೆ ಮಾಲನ್ನು ಠಾಣಾ ಪಿ.ಎಫ್. ನಂಬರ 24/2021 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮಾಲು ಪಟ್ಟಿಗೆ ಅಳವಡಿಸಿಕೊಂಡಿರುವ ಮಾಲುಗಳು ಈಗ ನ್ಯಾಯಾಲಯದ ಮುಂದೆ ಇರುತ್ತದೆ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಈಗಾಗಲೇ ಮು.ಮಾ.1 ರಿಂದ 8 ಅಂತ ಗುರುತಿಸಲಾಗಿದೆ. ಅವುಗಳನ್ನು ಸಾಕ್ಷಿದಾರರು ಗುರುತಿಸುತ್ತಾರೆ. ಮು.ಮಾ.5 ನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.

3. ನಂತರ ಅಂತರಾಮ ತೀರ್ಕಿ ಮತ್ತು ಮಧುರಾಜ @ ಮಧು ನಾಯ್ಕ ರವರನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ಅವರ ಸ್ವಋಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅವರ ಸ್ವಋಷಿ ಹೇಳಿಕೆಗಳಲ್ಲಿ ಅವರ ಮ್ಯಾನೇಜರ್ ಆದಂತಹ ಅನಿಲ್ ಜಾಕೂಬ್ ರವರು ಗಾಂಜಾವನ್ನು ಮಾರಾಟ ಮಾಡಿ ಹಣವನ್ನು ತೆಗೆದುಕೊಂಡು ಬನ್ನಿ ನಾನು ಹೆಚ್ಚಿನ ಹಣವನ್ನು ಕೊಡುತ್ತೇನೆ ಅಂತ ಹೇಳಿದರು, ಅದಕ್ಕಾಗಿ ನಾವು ಗೋವಾದಿಂದ ದಾವಣಗೆರೆಗೆ ಬಂದು ಮಾರಾಟ ಮಾಡುತ್ತಿದ್ದೇವೆ ಮತ್ತು ಈ ಹಿಂದೆಯು ಸಹ ಕರ್ನಾಟಕಕ್ಕೆ ಬಂದು ಗಾಂಜಾವನ್ನು ಮಾರಾಟ ಮಾಡಿ ಹಣವನ್ನು ಅನಿಲ್ ಜಾಕೂಬ್ ರವರಿಗೆ ಕೊಟ್ಟಿದ್ದೇವೆ ಅಂತ ತಿಳಿಸಿರುತ್ತಾರೆ. ನಂತರ 1 ನೇ ಆರೋಪಿತನು ಹಿಂದಿ ಭಾಷೆ ಮಾತನಾಡುತ್ತಿದ್ದರಿಂದ, ಚಾಸಾ-3 ರವರು 1 ನೇ ಆರೋಪಿಗೆ ನಾನು ಕನ್ನಡದಲ್ಲಿ ಹೇಳಿದ್ದನ್ನು ಹಿಂದಿಯಲ್ಲಿ ಭಾಷಾಂತರ ಮಾಡಿ ಹೇಳಿರುತ್ತಾರೆ. ಆರೋಪಿತರ ಸ್ವಋಷಿ ಹೇಳಿಕೆಗಳನ್ನು ಈಗ ನೋಡಿ ಅದರಲ್ಲಿರುವ ನನ್ನ ಹಾಗೂ ಆರೋಪಿತರ ಸಹಿಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಆರೋಪಿತರ ಪರ ವಕೀಲರ ತಕರಾರಿಗೆ

ಒಳಪಟ್ಟು ಕ್ರಮವಾಗಿ ನಿಪಿ-36 ಮತ್ತು 37 ಅಂತ, ಸಾಕ್ಷಿಯ ಸಹಿಗಳನ್ನು ನಿಪಿ-36(ಎ) ಮತ್ತು 37(ಎ) ಅಂತ, ಆರೋಪಿತರ ಸಹಿಗಳನ್ನು ನಿಪಿ-36(ಬಿ) ಮತ್ತು 37(ಬಿ) ಅಂತ ಗುರುತಿಸಲಾಯಿತು. ನಂತರ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1 ನೇ ಆರೋಪಿಯ ಸಹಿ ಹಿಂದಿ ಭಾಷೆಯಲ್ಲಿ ಇರುತ್ತದೆ. 2 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ನಾನು ದಸ್ತಗಿರಿ ಮಾಡಿದ 1 ಮತ್ತು 2 ನೇ ಆರೋಪಿತರ ಪೈಕಿ 2 ನೇ ಆರೋಪಿಯನ್ನು ಈಗ ವಿಸಿಯಲ್ಲಿ ನೋಡಿ ಗುರುತಿಸುತ್ತೇನೆ. ( 2 ನೇ ಆರೋಪಿಯು ಮತ್ತೊಂದು ಪ್ರಕರಣದಲ್ಲಿ ಆರೋಪಿಯಾಗಿದ್ದು ಅವರು ಈಗ ಗೋವಾ ಜೆ.ಸಿ.ಯಲ್ಲಿ ಇರುತ್ತಾರೆ.) ತಲೆ ಮರೆಸಿಕೊಂಡು 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-2 ರಿಂದ 8, 10, 11 ರವರ ಹೇಳಿಕೆಗಳನ್ನು ಅದೇ ದಿನ ಪಡೆದುಕೊಂಡಿರುತ್ತೇನೆ.

4. ದಿಃ 05-04-2021 ರಂದು ದಾವಣಗೆರೆಯ 2 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ದಾಳಿ ಕಾಲಕ್ಕೆ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಇನ್ವೆಂಟರಿ ಮಾಡಿಸಲು ಕೇಳಿಕೊಂಡಿರುತ್ತೇನೆ. ಕೋರಿಕೆ ಪತ್ರ ಜರಾಕ್ಸ ಪ್ರತಿ ಆಗಿರುವುದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ನಂತರ ಅದೇ ದಿನ ಸಂಜೆ ದಾವಣಗೆರೆಯ 2 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಇನ್ವೆಂಟರಿ ಮಾಡಿಸಿದ್ದು, ಆ ಕಾಲಕ್ಕೆ ಪ್ರತಿ ಗಾಂಜಾ ಪ್ಯಾಕೆಟ್ ನಿಂದ ತಲಾ 50 ಗ್ರಾಂ. ಗಾಂಜಾವನ್ನು FSL ಗೆ ಕಳುಹಿಸಲು Sample ನ್ನು ತೆಗೆಯಲಾಯಿತು. ಆ ಕಾಲಕ್ಕೆ ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿಯನ್ನು ಚಾಸಾ-9 ರವರಿಂದ ಮಾಡಿಸಲಾಯಿತು. ನಂತರ ಇನ್ವೆಂಟರಿ ಕಾಲಕ್ಕೆ Sample ತೆಗೆದ ಸೊತ್ತಿನ ಪಟ್ಟಿ 25/2021 ನೇದಕ್ಕೆ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಇನ್ವೆಂಟರ್ ಗೆ ಸಂಬಂಧಪಟ್ಟ 03

Certificate ಗಳನ್ನು ನ್ಯಾಯಾಲಯದಿಂದ ನೀಡಿರುತ್ತಾರೆ. ಅವುಗಳನ್ನು ಈಗ ನೋಡಿ ಗುರುತಿಸುತ್ತೇನೆ. ಅವುಗಳನ್ನು ನಿಪಿ-38 ರಿಂದ 40 ಅಂತ ಗುರುತಿಸಲಾಯಿತು.

ಮೂಲ ದಾಖಲೆಗಳು ಕಡತದಲ್ಲಿ ಲಭ್ಯವಿಲ್ಲದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 08-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

5. ಆ ದಿನ ನಾವು ನ್ಯಾಯಾಧೀಶರ ಮುಂದೆ ಮಾಡಿಸಿದ ಇನ್ವೆಂಟರಿ ಸಮಯದಲ್ಲಿ ತೆಗೆಸಿದ ಪೋಟೋವನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-29 ಅಂತ ಗುರುತಿಸಲಾಗಿದೆ. ಚಾಸಾ-9 ರವರ ಮುಖಾಂತರ ಇನ್ವೆಂಟರಿ ಕಾಲಕ್ಕೆ ಪೋಟೋ ಮತ್ತು ವಿಡಿಯೋಗ್ರಾಫಿ ಮಾಡಿಸಿದ್ದೇನೆ ಮತ್ತು ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಚಾಸಾ-9 ರವರಿಂದ ಕಲಂ 65B Cr.P.C. ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಅದನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಅದನ್ನು

ಈಗಾಗಲೇ ನಿಪಿ-31 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-31(ಬಿ) ಅಂತ ಗುರುತಿಸಲಾಯಿತು. ಸಿಡಿಯನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-28 ಅಂತ ಗುರುತಿಸಲಾಗಿದೆ.

6. ದಿಃ 06-04-2021 ರಂದು ಇನ್ವೆಂಟರಿ ಕಾಲಕ್ಕೆ ಸಂಗ್ರಹಿಸಿದ ಮಾದರಿಯನ್ನು ಚಾಸಾ-5 ರವರ ಮುಖಾಂತರ FSL ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 09-04-2021 ರಂದು ಚಾಸಾ-5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 3 ನೇ ಆರೋಪಿಯ ಪತ್ತೆಗಾಗಿ ಚಾಸಾ-5 ಮತ್ತು 6 ರವರನ್ನು ನೇಮಕ ಮಾಡಿ ಕಳುಹಿಸಿಕೊಟ್ಟಿರುತ್ತೇನೆ.

7. ದಿಃ 05-04-2021 ರಂದು AEE, PWD, ದಾವಣಗೆರೆಯವರಿಗೆ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ನೀಡಲು ಮನವಿ ಪತ್ರ ಸಲ್ಲಿಸಿರುತ್ತೇನೆ. ಆ ಮನವಿ ಪತ್ರವನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-32 ಅಂತ ಗುರುತಿಸಲಾಗಿದೆ. ದಿಃ 21-04-2021 ರಂದು AEE, PWD, ದಾವಣಗೆರೆಯವರಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಕವಚ ಪತ್ರದೊಂದಿಗೆ ಪಡೆದುಕೊಂಡಿರುತ್ತೇನೆ. ಅದನ್ನು ಈಗ ನೋಡಿ ಗುರುತಿಸುತ್ತೇನೆ. ಕವಚ ಪತ್ರವನ್ನು ಈಗಾಗಲೇ ನಿಪಿ-34 ಅಂತ ಗುರುತಿಸಲಾಗಿದೆ. ಅದನ್ನು ಈಗಾಗಲೇ ನಿಪಿ-33 ಅಂತ ಗುರುತಿಸಲಾಗಿದೆ. ಆರೋಪಿತರ ಮೇಲೆ ಸಾಕಷ್ಟು ಆರೋಪಗಳು ದೃಡಪಟ್ಟಿದ್ದರಿಂದ FSL ವರದಿ ಬರುವುದು ಬಾಕಿ ಇಟ್ಟು ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

8. ದಿಃ 15-09-2021 ರಂದು ಪಿ.ಎಸ್.ಐ., ಮೇಘರಾಜರವರು FSL ವರದಿಯನ್ನು ಪಡೆದುಕೊಂಡು, ಹೆಚ್ಚುವರಿ ದೋಷಾರೋಪಣ ಪತ್ರದೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನ್ಯಾಯಾಲಯದಲ್ಲಿ ಗೋವಾ ವಿಸಿ ಮೂಲಕ ಕಾಣುತ್ತಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಇನ್ವೆಂಟರಿ ಕಾಲಕ್ಕೆ ಸಂಗ್ರಹಿಸಿದ ಮಾದರಿಗಳು ಮು.ಮಾ.1 ರಿಂದ 4 ಇದ್ದು, ಅವುಗಳನ್ನು

ಈಗ ನೋಡಿ ಗುರುತಿಸುತ್ತೇನೆ. ಅವುಗಳ ಮೇಲೆ ಇರುವ ನನ್ನ ಸಹಿಯನ್ನು ಗುರುತಿಸುತ್ತೇನೆ. ಮು.ಮಾ.1 ರಿಂದ 4ರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ಮು.ಮಾ.1(ಬಿ) ದಿಂದ 4(ಬಿ) ಅಂತ ಗುರುತಿಸಲಾಯಿತು. ತಲೆ ಮರೆಸಿಕೊಂಡ 1 ಮತ್ತು 3 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.), ವಕೀಲರಿಂದ ಆರೋಪಿತರ ಪರವಾಗಿ**:

9. ನಿಪಿ-29 ರಲ್ಲಿ ನ್ಯಾಯಾಧೀಶರು " It is true " ಅಂತ Certificate ಇಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಇನ್ವೆಂಟರಿ ಮಾಡುವ ಕಾಲಕ್ಕೆ ಪೋಟೋವನ್ನು ತೆಗೆದಿರುತ್ತದೆ. ನಿಪಿ-29 ರಲ್ಲಿ ನಾವು ಮಾದರಿಯಾಗಿ ತೆಗೆದಿದಂತಹ ಗಾಂಜಾ ಕಾಣಿಸುತ್ತಿಲ್ಲ ಅಂದರೆ ಸಾಕ್ಷಿದಾರರು ಹೇಳುತ್ತಾರೆ ಅದು ತುಂಬಾ ಸಣ್ಣದಾಗಿರುತ್ತದೆ ಪೋಟೋದಲ್ಲಿ ಕಾಣುತ್ತದೆ. ಇನ್ವೆಂಟರಿಗಾಗಿ ತೆಗೆದು ಉಳಿದ ಗಾಂಜಾದ ಬಗ್ಗೆ ನಿಪಿ-38 ರಿಂದ 40 ರಲ್ಲಿ ನಮೂದು ಇಲ್ಲ ಅಂದರೆ ಬರೆದಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಉಳಿದ ಗಾಂಜಾವನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು. ನಿಪಿ-31 ರಲ್ಲಿ Hash value and Meta data ಇಲ್ಲ ಅಂದರೆ ನಿಜ.

10. ನಾನು ಕಡತವನ್ನು ತನಿಖೆಗಾಗಿ ಪಡೆದುಕೊಂಡಾಗ ಅದರ ಹಿಂದಿನ ತನಿಖೆಯನ್ನು ಪರಿಶೀಲನೆ ಮಾಡಿದ್ದೆ. ದಾವಣಗೆರೆಯ ಚಿಂದೋಡಿ ಲೀಲಾ ರಂಗ ಮಂದಿರ ಎನ್.ಹೆಚ್. 48 ದಿಂದ ಹರಿಹರದ ಹೊರ ವಲಯದಲ್ಲಿರುವ ಎನ್.ಹೆಚ್. 48 ನಡುವೆ ಅಂತರ 20 ಕಿ.ಮೀ. ಇರುತ್ತದೆ ಅಂದರೆ ಇರಬಹುದು. ನಿಪಿ-1 SHD ದಲ್ಲಿ ಮಕ್ಕಾಲು ಭಾಗದಷ್ಟು ಖಾಲಿ ಇರುತ್ತದೆ ಅಂದರೆ ಅದು ತಾಂತ್ರಿಕ ದೋಷ ಇರುತ್ತದೆ. ಅದು ತಾಂತ್ರಿಕ ದೋಷ ಇರುವುದು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-1 ಪುಟ ಸಂಖ್ಯೆ 4 ಕ್ರಮ ಸಂಖ್ಯೆ 11 ರಲ್ಲಿ ಕಾಣಿಸಿರುವಂತಹ ಸ್ಥಳ ಹಾಗೂ ನಿಪಿ-

2 ರಲ್ಲಿ ಕಾಣಿಸಿರುವಂತಹ ಸ್ಥಳ ಬೇರೆ ಬೇರೆ ಇರುತ್ತವೆ ಅಂದರೆ ನಿಜ. ಅದರಂತೆಯೇ ನಿಪಿ-23 ರ ಕಚ್ಚಾ ನಕಾಶೆ ಹಾಗೂ ನಿಪಿ-33 ರಲ್ಲಿ ತೋರಿಸಿರುವ ನಕಾಶೆ ಬೇರೆ ಬೇರೆ ಇರುತ್ತವೆ ಅಂದರೆ ಅಂದರೆ ಸರಿಯಲ್ಲ.

11. 2 ನೇ ಆರೋಪಿಯು ನನ್ನ ಸಮಕ್ಷಮದಲ್ಲಿ ಯಾವುದೇ ಸ್ವಇಚ್ಛೆ ಹೇಳಿಕೆ ನೀಡಿಲ್ಲ, ಆತನನ್ನು ಹೆದರಿಸಿ ಬೆದರಿಸಿ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. 2 ನೇ ಆರೋಪಿಗೆ ಯಾವ ಕಾರಣಕ್ಕಾಗಿ ದಸ್ತಗಿರಿ ಮಾಡಲಾಗಿದೆ ಅಂತ ಮಾಹಿತಿ ನೀಡಲಾಗಿಲ್ಲ ಅಂದರೆ 2 ನೇ ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆ ಕಾರಣ ತಿಳಿಸಿದ್ದೇವೆ ಮತ್ತು ಆತನ ಸಂಬಂಧಿಕರಿಗೆ ತಿಳಿಸಿದ್ದೇವೆ. ನಿಪಿ-27 ರಲ್ಲಿ ಎಸ್.ಪಿ. ರವರು ಯಾವ ಸಮಯಕ್ಕೆ ವರದಿ ಮಾಡಿದ್ದಾರೆ ಅಂತ ನಮೂದು ಇಲ್ಲ ಅಂದರೆ ಅದು ನಾನು ಕಳುಹಿಸಿದ್ದಲ್ಲ. ಮಾದರಿಯನ್ನು ಬೆಂಗಳೂರಿನ RFSL ರವರಿಗೆ ಅಭಿಪ್ರಾಯಕ್ಕಾಗಿ ಕಳುಹಿಸಿದ್ದೇವೆ. ಮಾದರಿಯನ್ನು 72 ಗಂಟೆಗಳ ಒಳಗಡೆ FSL ಗೆ ಕಳುಹಿಸಿರುವುದಿಲ್ಲ ಅಂದರೆ ನಮ್ಮ ಕಛೇರಿಯಿಂದ ಹೋಗಿದೆ. ಸಾಕ್ಷಿದಾರರು ಹೇಳುತ್ತಾರೆ ಅದು ಮೇಲಾಧಿಕಾರಿಗಳ ಸಹಿ ಆದ ನಂತರ ಹೋಗುತ್ತದೆ. 2 ನೇ ಆರೋಪಿಯು ಗಾಂಜಾ ಮಾರಾಟ ಮಾಡಿ ಎಷ್ಟು ಆಸ್ತಿ ಖರೀದಿ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದ ರೀತಿಯಲ್ಲಿ 2 ನೇ ಆರೋಪಿಯು ಗಾಂಜಾ ಮಾರಾಟ ಮಾಡುತ್ತಿರಲಿಲ್ಲ ಮತ್ತು ಅವರ ಹತ್ತಿರ ಯಾವುದೇ ಗಾಂಜಾ ಸಿಕ್ಕಿರುವುದಿಲ್ಲ, ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

12. ನಾನು ಹೇಳಿದ ರೀತಿಯಲ್ಲಿ ನಾನು ಯಾವುದೇ ನೋಟೀಸ್ಸು ಕೊಟ್ಟಿಲ್ಲ ಮತ್ತು ಯಾವುದರಲ್ಲೂ ಸಮಯವನ್ನು ನಮೂದು ಮಾಡಿಲ್ಲ ಅಂದರೆ ಸರಿಯಲ್ಲ. ದಾಳಿ ಸಮಯದಲ್ಲಿ ಉಪಯೋಗಿಸಿದ ಸೀಲ್ ನ್ನು ಯಾರಿಗೆ ಹಸ್ತಾಂತರಿಸಲಾಗಿದೆ ಅಂದರೆ ಕಛೇರಿಯ ಸೀಲ್ ಕಛೇರಿಯಲ್ಲಿಯೇ ಇರುತ್ತದೆ. ಚಾಸಾ-1 ರವರು ಆ ರೀತಿ ಸೀಲ್ ನ್ನು ಇಟ್ಟುಕೊಂಡ ಬಗ್ಗೆ ನಮಗೆ

ಯಾವುದೇ ರೀತಿ ಮೇಮೋ ಕೊಟ್ಟಿಲ್ಲ ಅಂದರೆ ಅದಕ್ಕೆ ಮೇಮೋ ಅವಶ್ಯಕತೆ ಇಲ್ಲ. ಸ್ಥಳೀಯ ಸಾಕ್ಷಿದಾರರನ್ನಾಗಿ ನಮೂದು ಮಾಡಿಲ್ಲ ಅಂದರೆ ನಿಜ. ಟ್ರಾಫಿಕ್ ಪೊಲೀಸರು ಅಳವಡಿಸಿದ ಸಿಸಿಟಿವಿ ಪೂಟೇಜ್ ಮತ್ತು ಚಂದೋಡಿ ಲೀಲಾ ರಂಗ ಮಂದಿರದ ಹತ್ತಿರ ಇರುವ ಸಿಸಿಟಿವಿ ಪೂಟೇಜ್ ನ್ನು ನಾನು ಪಡೆದುಕೊಂಡಿಲ್ಲ ಅಂದರೆ ಅಲ್ಲಿ ಯಾವುದೇ ಸಿಸಿಟಿವಿ ಇರಲಿಲ್ಲ. ಎಲ್ಲಾ ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. 65B ಪ್ರಮಾಣ ಪತ್ರವನ್ನು ಸುರಭಿ ಪೋಟೋ ಸ್ಟುಡಿಯೋದವರಿಂದ ಪಡೆದುಕೊಂಡಿಲ್ಲ.

13. ಅಮಾನತ್ತು ಮಾಡಿಸಿಕೊಂಡಿದ್ದೇವೆ ಅಂತ ಹೇಳಲಾದ ಗಾಂಜಾದಲ್ಲಿ ಹೂ, ಕಾಯಿ, ಎಲೆ ಮತ್ತು ಕಾಂಡ ಎಷ್ಟು ಎಷ್ಟು ಇತ್ತು ಅಂತ ನಮೂದು ಮಾಡಿಲ್ಲ ಅಂದರೆ ಅದು ಒಟ್ಟಿಗೆ ಇರುತ್ತದೆ ಬಿಡಿಸಿ ಬಿಡಿಸಿ ಮಾಡಲು ಆಗುವುದಿಲ್ಲ. ಇನ್ವೆಂಟರಿ ಮಾಡುವ ಕಾಲಕ್ಕೆ ನ್ಯಾಯಾಧೀಶರು ಅಮಾನತ್ತು ಪಡಿಸಿಕೊಂಡಿದ್ದೇವೆ ಅಂತ ಹೇಳಲಾದ ಗಾಂಜಾದ ಪ್ಯಾಕೇಟ್ ನ್ನು ಓಪನ್ ಮಾಡಿ ಕ್ಲೋಸ್ ಮಾಡುತ್ತಾರೆ ಅದರ ಬಾಬ್ತು ಅವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಅಂದರೆ ನಿಜ. ಪಾರದರ್ಶಕವಾಗಿ, ಕಠಿಣವಾಗಿ ಮತ್ತು ನಿಯಮಾನುಸಾರವಾಗಿ ಸರಿಯಾದ ರೀತಿಯಲ್ಲಿ ತನಿಖೆ ಮಾಡಿಲ್ಲ ಅಂದರೆ ಸರಿಯಲ್ಲ. 2 ನೇ ಆರೋಪಿಯ ವಿರುದ್ದ ನಾನು ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

14. ಚಾಸಾ-5 ರವರಿಗೆ ನೀಡಿದ ಪಾಸಪೊರ್ಟನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಅದನ್ನು ನಿಪಿ-43 ಅಂತ, ಸಾಕ್ಷಿಯ ಸಹಿಯನ್ನು ನಿಪಿ-43(ಎ) ಅಂತ ಗುರುತಿಸಲಾಯಿತು. ಚಾಸಾ-5 ರವರು ಬೆಂಗಳೂರಿನ FSL ಗೆ ಹೋಗಿ ಮು.ಮಾ.1 ರಿಂದ 4

ನೀಡಿರುತ್ತಾರೆ. ಅದರ ಬಾಬ್ತು FSL ನಿಂದ ಪಡೆದ ಸ್ವೀಕೃತಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-44 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.), ವಕೀಲರಿಂದ ಆರೋಪಿತರ ಪರವಾಗಿ**:

15. Chain of custody form ನ್ನು ಪಡೆದುಕೊಂಡಿಲ್ಲ ಅಂದರೆ ಸರಿ. ಮುದ್ದೆಮಾಲುಗಿಳಿಗೂ ಆರೋಪಿಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

SD/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.